# ಮೌಲ್ಯ ಮಾಪನ – ನಡೆದು ಬಂದ ದಾರಿ

ಕೆ. ಆರ್. ಶರ್ಮಾ



ಇತ್ತೀಚೆಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ (ಸಿಸಿಇ) ಬಗ್ಗೆ ಶಾಲೆಗಳಲ್ಲಿ ಬಹಳ ಚರ್ಚೆಗಳಾಗುತ್ತಿವೆ. ಮೌಲ್ಯಮಾಪನದ ಹಿಂದಿನ ವಿಧಾನಗಳನ್ನು ನಿಷ್ಪರಿಣಾಮಕಾರಿ, ಸಂಪೂರ್ಣವಾಗಿ ಪರೀಕ್ಷಾ ಪದ್ಧತಿಯ ಜಾಲದಲ್ಲಿ ಸಿಲುಕಿಹೋಗಿ ಎಲ್ಲವೂ ಅದನ್ನೆ ಅವಲಂಬಿಸಿರುತ್ತಿತ್ತು ಎಂದು ಕೆಲವರು ಪರಿಗಣಿಸುತ್ತಾರೆ. ತಮ್ಮ ಕಲಿಕೆಯು, ಮನೋಧೋರಣೆಯನ್ನು ಬದಲಿಸುವಲ್ಲಿ ಹೇಗೆ ಉಪಯುಕ್ತವಾಗಿದೆ ಎಂಬುದನ್ನು ವಿದ್ಯಾರ್ಥಿಗಳಿಗೆ ತೋರಿಸುವುದಕ್ಕೆ ಮೌಲ್ಯಮಾಪನದ ಹಿಂದಿನ ವಿಧಾನಗಳು ಸಮರ್ಥವಾಗಿಲ್ಲ. ಅಲ್ಲದೇ, ಮಕ್ಕಳು ಏನನ್ನು ಕಲಿತಿದ್ದಾರೆ ಅಥವಾ ಕಲಿತಿಲ್ಲ ಎಂಬುದನ್ನು ಅವರ ಪೋಷಕರಿಗೆ ಸೂಚಿಸಲೂ ಅವು ಸಮರ್ಥವಾಗಿಲ್ಲ.

ಇಂದು, ಮೌಲ್ಯಮಾಪನವು ಒಂದು ವಿಭಿನ್ನ ತಿರುವನ್ನು ಪಡೆದಿದೆ. ಇಲ್ಲಿಯವರೆಗೂ, ಇದು ಮಕ್ಕಳು ಏನನ್ನು ತಿಳಿದಿಲ್ಲ ಎಂಬುದನ್ನು ಮಾತ್ರ ತೋರಿಸಲು ಸಮರ್ಥವಾಗಿತ್ತು. ಪರೀಕ್ಷೆಯು ಮಗುವಿನ ಜ್ಞಾನ ಎಷ್ಟರ ವರೆಗೆ ಬೆಳೆದಿದೆ ಎಂಬುದನ್ನು ತೋರಿಸುವುದಕ್ಕಾಗಲೀ, ಅವನು/ಅವಳು ಎಲ್ಲಿಯವರೆಗೆ ಪ್ರಗತಿಹೊಂದಿರುವರೆಂಬುದನ್ನು ಸೂಚಿಸುವುದಕ್ಕಾಗಲೀ ಸಮರ್ಥವಾಗಿರಲಿಲ್ಲ. ಇದು ಮಕ್ಕಳ ಮನೋವಿಜ್ಞಾನದ ನಿಯಮಗಳಿಗೆ ಸಂಪೂರ್ಣ ವಿರುದ್ಧವಾದದ್ದು. ಪರೀಕ್ಷೆಯು ಮಗುವಿನ ಮನಸ್ಸಿನಲ್ಲಿ ಎಷ್ಟು ಭಯ ಹುಟ್ಟಿಸುತ್ತದೋ ಅಷ್ಟರ ಮಟ್ಟಿಗೆ ಅದು ಶ್ರೇಷ್ಠ ಎಂಬ ಒಂದು ಜನಪ್ರಿಯವಾದ ಕಲ್ಪನೆ ಹೇಗೋ ಬೆಳೆದುಬಿಟ್ಟಿದೆ. ಇದೇ ಆಲೋಚನೆ ಜನರಲ್ಲಿ ಬೇರುಬಿಟ್ಟಿದೆ. ಆದರೂ, ಈಗ ಈ ಪರಿಸ್ಥಿತಿ ಬದಲಾಗಿದೆ. ನಾವು ಈಗ ಮೌಲ್ಯಮಾಪನವನ್ನು ಬೇರೆಯದೇ ಆದ ರೀತಿಯಲ್ಲಿ ನೋಡುವಂತಹ ಒಂದು ಘಟ್ಟದಲ್ಲಿದ್ದೇವೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) 2005ರ ಗುರಿಗಳು ಈಗ ನಮ್ಮ ಮುಂದಿವೆ. ಇದುವರೆಗೂ ಕಲಿಕಾ ನಿರ್ಧರಣೆಯು ಅಪಾಯಕಾರಿ ಶಂಕೆಯನ್ನು ಆಧರಿಸಿದ್ದಾಗಿತ್ತು ಎಂಬ ವಾಸ್ತವವನ್ನು ಎನ್‌ಸಿಎಫ್ ಗಮನಿಸಿದೆ. ಕಲಿಕಾ ನಿರ್ಧರಣೆಯು ಎಂದೂ ಹೀಗಿರಬಾರದು ಎನ್ನುವ ಅಂಶವನ್ನು ಅದು ಮನಗಂಡಿದೆ.

ಈ ವಿಧಾನಗಳಿಂದ ಮಗುವನ್ನು ನಿಯಂತ್ರಿಸುವುದು ಅಥವಾ ಹತೋಟಿಯಲ್ಲಿಡುವುದು ಮೌಲ್ಯಮಾಪನದ ಗುರಿಯಾಗಬಾರದು. ಮಕ್ಕಳಿಗೆ "ಮೂರ್ಖ ಮತ್ತು ನಿಧಾನಿ" ಅಥವಾ "ಜಾಣ ಮತ್ತು ಬುದ್ಧಿವಂತ" ಎಂಬ ಹಣೆಪಟ್ಟಿಯನ್ನು ನೀಡಿ ಅದರಿಂದಾಗಿ ಅವರನ್ನು ಹೀಗಳೆಯುವುದು ಶಿಕ್ಷಣದ ಮೂಲ ತತ್ವಗಳಿಗೆ ವಿರುದ್ಧವಾಗುತ್ತದೆ.

ಆರ್‌ಟಿಇ ಒಂದೆಡೆ, ಎಲ್ಲ ಮಕ್ಕಳನ್ನು ಶಿಕ್ಷಣದ ಆಶ್ರಯದಡಿಗೆ ತರಲು ಇಚ್ಛಿಸಿದರೆ, ಇನ್ನೊಂದೆಡೆ ಅದು 5ನೇ ವರ್ಗದ ಪರೀಕ್ಷೆಗಳನ್ನು ಪರಿಹಾರಾತ್ಮಕವಾದದ್ದು ಎಂದು ಹೇಳುತ್ತದೆ. ಇದು, ಹಳೆಯ ಪದ್ಧತಿಗಳನ್ನು ಸಂಪೂರ್ಣವಾಗಿ ಬೇರು ಸಹಿತ ಕಿತ್ತು, ಮಕ್ಕಳ ಕಲಿಕಾ ಸಾಮರ್ಥ್ಯಗಳಿಗೆ ಶಕ್ತಿ ತುಂಬುವಂತಹ ಶಿಕ್ಷಣ ಪದ್ಧತಿಯನ್ನು ಸೃಷ್ಟಿಸಲು ಬಯಸುತ್ತದೆ. ಮಕ್ಕಳ ಮಾನಸಿಕ ಮತ್ತು ದೈಹಿಕ ವೈಶಿಷ್ಟ್ಯಗಳನ್ನು ಪೋಷಿಸಿ ಅವರ ಜ್ಞಾನ ಮತ್ತು ತಿಳುವಳಿಕೆಯನ್ನು ಹೆಚ್ಚಿಸುವ ಮೂಲಕ ಸಮಗ್ರ ಅಭಿವೃದ್ಧಿಯಾಗುವುದಕ್ಕೆ ಪ್ರಾಧಾನ್ಯತೆಯನ್ನು ನೀಡಬೇಕು ಎಂದು ಆರ್‌ಟಿಇ ನಿರ್ದಿಷ್ಟವಾಗಿ ಹೇಳುತ್ತದೆ.

ನಾವು ನಿಜವಾಗಿಯೂ ಮಕ್ಕಳ ಸಾಮರ್ಥ್ಯ ವರ್ಧನೆಯ ಆಸಕ್ತಿಯನ್ನು ಹೊಂದಿರುವುದೇ ಆದರೆ, ಶಿಕ್ಷಕರನ್ನೂ ಈ ಬದಲಾವಣೆಗೆ ಸಿದ್ಧಪಡಿಸಬೇಕು. ಒಂದು ಸಂಸ್ಥೆಯಲ್ಲಿನ ವಿದ್ಯಾರ್ಥಿಗಳು ಜ್ಞಾನವನ್ನು ಗಳಿಸಲು ಸಮರ್ಥರು – ಅವರ ಸಾಮರ್ಥ್ಯವನ್ನು ಪ್ರದರ್ಶಿಸುವಂತಹ ಶಕ್ತಿ ಇರುವವರು ಆಗಿದ್ದರೆ ಮಾತ್ರ, ಆ ಸಂಸ್ಥೆಯನ್ನು ಶಿಕ್ಷಣ ನೀಡಲು ಸಮರ್ಥ ಎಂದು ಕರೆಯಬಹುದು. ಶಿಕ್ಷಕರಿಗೆ ಕಲಿಯಲು ಮತ್ತು ನಿರಂತರವಾಗಿ ತಮ್ಮ ಜ್ಞಾನವನ್ನು ನವೀಕರಿಸಿಕೊಳ್ಳಲು ಅವಕಾಶಗಳನ್ನು ನೀಡಬೇಕು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ನವೀನ ಪ್ರವೃತ್ತಿಗಳಿಗೆ ತಕ್ಕಂತೆ ಹೊಂದಿಕೊಳ್ಳಲು ಸರ್ಕಾರವು ಅನೇಕ ವಿಧಾನಗಳನ್ನು ಸೃಷ್ಟಿಸಿದೆ – ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ ಸರ್ವ ಶಿಕ್ಷಣ ಅಭಿಯಾನ, ಜಿಲ್ಲಾ ಶೈಕ್ಷಣಿಕ ಪ್ರಾಧಿಕಾರ, ಸಮೂಹ ಸಂಪನ್ಮೂಲ ಕೇಂದ್ರಗಳು (ಸಿಆರ್‌ಸಿ). ಈ ಎಲ್ಲಾ ಸಂಸ್ಥೆಗಳೊಂದಿಗೆ ಶಾಲಾ ಮುಖ್ಯಸ್ಥರು ಸಂಪರ್ಕವನ್ನು ಹೊಂದಿರುತ್ತಾರೆ.

ಪರೀಕ್ಷೆಯಲ್ಲಿನ ಎಲ್ಲಾ ವಿಧವಾದ ಒತ್ತಡಗಳು ಮತ್ತು ಆತಂಕಗಳನ್ನು ನಿರ್ಮೂಲ ಮಾಡುವುದು ಮತ್ತು ತಮ್ಮ ವಿದ್ಯಾರ್ಥಿಗಳನ್ನು ವಿವಿಧ ಮಾನದಂಡಗಳ ಮೂಲಕ ಮೌಲ್ಯಮಾಪನ ಮಾಡಲು ಶಿಕ್ಷಕರಿಗೆ ಅವಕಾಶಗಳು ದೊರೆಯುವಂತೆ ಮಾಡುವುದು ಸಿಸಿಇಯಲ್ಲಿ ಅಡಗಿರುವ ತತ್ವವಾಗಿದೆ.

ಒಂದು ಪ್ರಶ್ನೆ ಉದ್ಭವಿಸುತ್ತದೆ: ಶಿಕ್ಷಕರು ತಾವು ಮಗುವಿನ ಕಲಿಕೆಯ ಎಲ್ಲಾ ಅಂಶಗಳನ್ನು ಮಾಲ್ಯಮಾಪನ ಮಾಡಿದ್ದೇವೆ, ಹೀಗಾಗಿ, ಅವರು ಪ್ರಗತಿ ಹೊಂದುತ್ತಾರೆಂದು ಹೇಗೆ ಖಚಿತಪಡಿಸಿಕೊಳ್ಳುತ್ತಾರೆ? ಇದಲ್ಲದೇ ಸಿಸಿಇ ಮತ್ತೊಂದು ಪ್ರಶ್ನೆಯನ್ನೂ ಮೂಡಿಸುತ್ತದೆ – ಮಗುವು ನಪಾಸಾಗಿದೆ ಎಂದು ಪರಿಗಣಿಸುವಂತಿಲ್ಲ ಎನ್ನುವುದಾದರೆ ಶಿಕ್ಷಣ ವ್ಯವಸ್ಥೆಯ ಗುರಿಯೇನು? ಅವರ ಪ್ರಗತಿಯನ್ನು ಮೌಲ್ಯಮಾಪನ ಮಾಡದಿದ್ದಲ್ಲಿ ಅವರು ಆ ವ್ಯವಸ್ಥೆಗೆ ಏಕೆ ಒಳಪಡಬೇಕು? ಈ ಪ್ರಶ್ನೆಯು, ಕಲಿಕೆಯ ಮೌಲ್ಯಮಾಪನವನ್ನು ಮಾಡಿದರೆ ಮಾತ್ರ ಕಲಿಕೆಯು ಸಾಧ್ಯ ಎಂಬ ದೃಷ್ಟಿಯನ್ನು ಹುಟ್ಟುಹಾಕುತ್ತದೆ. ಈ ದೃಷ್ಟಿಯು ಸಂಪೂರ್ಣವಾಗಿ ಸರಿಯಾದದ್ದಲ್ಲ: ಕಲಿಕೆಯು ಪೋಷಣಾತ್ಮಕವಾದ ಪರಿಸರದಲ್ಲಿ ಮಾತ್ರ ಸಾಧ್ಯವಾಗುತ್ತದೆ ಒತ್ತಡದ ಪರಿಸರದಲ್ಲಿ ಅಲ್ಲ. ಶಾಲೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಪದ್ಧತಿಗೆ ಪರಿಚಿತರಾಗದಿದ್ದಲ್ಲಿ, ಮುಂದೆ ಜೀವನದಲ್ಲಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಅವರು ಹೇಗೆ ಎದುರಿಸುತ್ತಾರೆ? ಎಂಬ ಇನ್ನೊಂದು ವಾದವನ್ನೂ ಮಂಡಿಸಲಾಗಿದೆ.

ನಿರಂತರ ಮೌಲ್ಯಮಾಪನದ ಹಿಂದಿರುವ ವಿಚಾರವೆಂದರೆ ಇದು ಶಿಕ್ಷಕರು ಏನನ್ನು ಬೋಧಿಸಲಾಗಿದೆ ಎಂಬುದನ್ನು ಮಾತ್ರ ಪರ್ಯಾಲೋಚಿಸುವುದಲ್ಲದೇ ಏನನ್ನು ಕಲಿಸಲಾಯಿತು ಎಂಬುದನ್ನೂ ಪರೀಕ್ಷಿಸಿಕೊಳ್ಳುವಂತಹ ಒಂದು ನಿರಂತರವಾದ ಪ್ರಕ್ರಿಯೆಯಾಗಿದೆ. ಕಲಿಕೆಯ ಪರಿಕಲ್ಪನಾ ಹಂತದಲ್ಲಿ ಕಲಿಕೆಯಾಗುತ್ತಿದೆ ಎಂಬುದನ್ನು ದೃಢಪಡಿಸಿಕೊಳ್ಳಲು ಇದು ಶಿಕ್ಷಕರಿಗೆ ಹಿಮ್ಮಾಹಿತಿಯನ್ನು ಒದಗಿಸುತ್ತದೆ. ತರಗತಿಯಲ್ಲೇ ಪರಿಕಲ್ಪನೆಯನ್ನು ಕಲಿಯುವುದಕ್ಕೆ ಒತ್ತನ್ನು ನೀಡಬೇಕು. ಉದಾಹರಣೆಗೆ, ಓದುವ ಮತ್ತು ಬರೆಯುವ ಕೌಶಲವನ್ನು ಮೊದಲೇ ಕಲಿಯಲಾಗಿದೆಯೇ ಎಂಬುದನ್ನು ಆರಂಭದಲ್ಲೇ ತಿಳಿದುಕೊಳ್ಳಬೇಕು. ಏಕೆಂದರೆ, ಇವೆರಡೂ ಮುಂದಿನ ಕಲಿಕೆಗೆ ಅಡಿಪಾಯವಿದ್ದಂತೆ. ಹೀಗಾಗಿ, ಶಿಕ್ಷಕರಿಗೆ ವಿದ್ಯಾರ್ಥಿಗಳಿಗಿರುವ ಕೌಶಲಗಳ ಬಗ್ಗೆ ಅರಿವು ಇರಬೇಕಾದದ್ದು ಬಹಳ ಮುಖ್ಯ. ಉನ್ನತ ತರಗತಿಗಳ ಶಿಕ್ಷಕರು ವಿಜ್ಞಾನ ತರಗತಿಗಳೊಂದಿಗೆ ಬರುವ ಪ್ರಾಯೋಗಿಕ ತರಗತಿಗಳು, ಬೋಧಿಸಲಾದ ಪರಿಕಲ್ಪನೆಗಳಲ್ಲಿನ ಅರಿವನ್ನು ಸಾಕಷ್ಟು ವರ್ಧಿಸುವಂತೆ ನೋಡಿಕೊಳ್ಳಬೇಕು ಹಾಗೂ ತಮ್ಮ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡುವ ಮೂಲಕ ವಿದ್ಯಾರ್ಥಿಗಳು ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡಿದ್ದಾರೆ ಎಂದು ದೃಢಪಡಿಸಿಕೊಳ್ಳಲು ಸಮರ್ಥರಾಗಿರಬೇಕು. ಪರೀಕ್ಷಿಸುವುದು ಮಕ್ಕಳು ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡಿದ್ದಾರೆ ಎನ್ನುವುದನ್ನು ತೋರಿಸಬೇಕು ಹಾಗೂ ಈ ಪರಿಕಲ್ಪನೆಗಳನ್ನು ಮಗುವಿನ ಪರಿಪಕ್ವತಾ ಚಕ್ರದಲ್ಲಿ ಬಹಳ ಮೊದಲೇ ತಿಳಿಸಲಾಗಿದೆಯೇ ಎನ್ನುವುದನ್ನೂ ತೋರಿಸುವಂತಿರಬೇಕು. ಪರೀಕ್ಷಿಸುವುದು ತರಗತಿಯಲ್ಲಿ ಏನೇನು ನಡೆಯುವುದೋ ಅವುಗಳೆಲ್ಲದರ ಸಮಗ್ರ ಪರೀಕ್ಷೆಯಾಗಿರಬೇಕು. ಕಲಿಕೆಯ ಮತ್ತೊಂದು ಪ್ರಮುಖವಾದ ಅಂಶವೆಂದರೆ ತರಗತಿಯಲ್ಲಾಗುವ ವಿಚಾರ ವಿನಿಮಯಗಳ ಮಟ್ಟ.

ಇಂದಿನ ಕಲಿಕೆಯು ವಿಪರೀತವಾಗಿ ಪರೀಕ್ಷಾಭಿಮುಖವಾಗಿದೆ ಹಾಗೂ ಪರೀಕ್ಷಾ ವಿಧಾನಗಳು ವಿದ್ಯಾರ್ಥಿಗಳನ್ನು ಸಂಪೂರ್ಣವಾಗಿ ಮೌಲ್ಯಮಾಪನ ಮಾಡುವುದಿಲ್ಲ. ಎಲ್ಲಾ ಪರೀಕ್ಷೆಗಳೂ ಅದು ಯಾವುದೇ ಆಗಿರಬಹುದು, ಉದಾಹರಣೆಗೆ, ವಿಜ್ಞಾನ ಅಥವಾ ಭಾಷೆಯಾಗಿರಬಹುದು, ಇವೆಲ್ಲವೂ ಏಕರೂಪವಾದ ವಿಧಾನಗಳನ್ನು ಹೊಂದಿರುವಂತೆ ಕಾಣುತ್ತದೆ. ನಾವು ಎನ್‌ಸಿಎಫ್ ನಿರ್ದೇಶಿಸುವಂತೆ ಪರೀಕ್ಷೆಗಳು ವಿಷಯಕ್ಕೆ ಹೊಂದಾಣಿಕೆಯಾಗುವಂತೆ ಮಾಡಬೇಕು. ಭಾಷೆಗೆ (ಮಾತೃ ಭಾಷೆ) ಸಂಬಂಧಿಸಿದಂತೆ, ಸೂಕ್ತವಾದ ಮೌಲ್ಯಮಾಪನ ವಿಧಾನಗಳನ್ನು ನಾವು ವಿನ್ಯಾಸಗೊಳಿಸಬೇಕು. ಉದಾಹರಣೆಗೆ, ಓದುವುದನ್ನು ಬರವಣಿಗೆ ಪರೀಕ್ಷೆಯ ಮೂಲಕ ಅಥವಾ ಬರೆಯುವ ಕಾರ್ಯದ ಮೂಲಕ ತೀರ್ಮಾನಿಸುವುದು ಸೂಕ್ತವಾದುದಲ್ಲ. ಮಕ್ಕಳ ಓದುವಿಕೆಯ ಮಟ್ಟವನ್ನು ಅವರು ತರಗತಿಯಲ್ಲಿ ಓದುವಾಗಲೇ ಶಿಕ್ಷಕರು ಮೌಲ್ಯಮಾಪನ ಮಾಡಬೇಕು. ಎಲ್ಲಾ ಮಕ್ಕಳಿಗೂ ಓದುವ ಅವಕಾಶ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಶಾಲೆಯಲ್ಲಿನ ಒಂದು ತರಗತಿಯಲ್ಲಿ 50 – 60 ವಿದ್ಯಾರ್ಥಿಗಳು ಇದ್ದಲ್ಲಿ, ಇದು ಬಹಳ ಕಷ್ಟವಾದ ಕೆಲಸ. ಒಂದು ಸಲಹೆ ಎಂದರೆ ಇಂತಹ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ವಿಭಿನ್ನ ಗುಂಪುಗಳಾಗಿ ವಿಂಗಡಿಸಿ ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೆ ಒಂದು ಸಲ ಅವರಿಗೆ ಓದುವ ಅವಕಾಶಗಳನ್ನು ನೀಡಿ ಅವರ ಓದುವಿಕೆಯ ಮಟ್ಟವನ್ನು ಪರೀಕ್ಷಿಸುವುದು

ಮತ್ತು ಹೀಗೆ ಅವರ ಪ್ರಗತಿಯನ್ನೂ ಪರೀಕ್ಷಿಸಬಹುದು. ಬರವಣಿಗೆಯಲ್ಲಿನ ಪ್ರಗತಿಯನ್ನು ಪರೀಕ್ಷಿಸಲು, ಪ್ರತಿ ಮಗುವಿನ ಪೋರ್ಟ್‌ಫೋಲಿಯೋಗಳನ್ನು ತಯಾರಿಸಿ ಅವುಗಳಲ್ಲಿ ಅವರ ವೈಯಕ್ತಿಕ ಬರವಣಿಗೆ ಅಥವಾ ಚಿತ್ರ ರಚನೆಗಳ ಮಾದರಿಗಳನ್ನು ಇಡಬೇಕು. ಪುಸ್ತಕಗಳಲ್ಲಿನ ಬರವಣಿಗೆ ಕಾರ್ಯವನ್ನು ಮಗುವಿನ ಕಾರ್ಯವಾಗಿ ದಾಖಲಿಸುವುದು ಇರುವ ಮತ್ತೊಂದು ಮಾರ್ಗ.

ಸಿಸಿಇ ಬಗ್ಗೆ ಇರುವ ಒಂದು ಟೀಕೆ ಎಂದರೆ ಇದು ಶಿಕ್ಷಕರ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ ಎಂಬುದು. ಸಿಸಿಇ ಬಗ್ಗೆ ಅರ್ಥಮಾಡಿಕೊಳ್ಳಬೇಕಾದ ಒಂದು ಪ್ರಮುಖವಾದ ಅಂಶವೆಂದರೆ ಇದು ತರಗತಿ ಚಟುವಟಿಕೆಯ ಒಂದು ಅವಿಚ್ಛಿನ್ನವಾದ ಭಾಗ ಹಾಗೂ ಇದನ್ನು ಬೋಧಿಸುವುದರೊಂದಿಗೆ ಮಾಡಿದರೆ ಒಂದು ಸುಲಭವಾದ ಪ್ರಕ್ರಿಯೆಯಾಗುತ್ತದೆ ಎಂಬುದು. ಒಟ್ಟಾರೆ, ಬೋಧನೆ – ಕಲಿಕೆಯ ಅನುಭವವೇ ಪ್ರಮುಖವಾದದ್ದು ಇದು ಯಾವುದೇ ಹಂತದಲ್ಲೂ ಹಳಿ ತಪ್ಪಬಾರದು.



***ಕೆ ಆರ್ ಶರ್ಮಾ*** *ಡೆಹರಾಡೂನಿನಲ್ಲಿರುವ ಅಜೀಂ ಪ್ರೇಂಜೀ ಪ್ರತಿಷ್ಠಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಹಿಂದೆ ಹೋಷಂಗಾಬಾದ್‌ನಲ್ಲಿರುವ ಏಕಲವ್ಯದಲ್ಲಿ 20 ವರ್ಷಗಳು ಕೆಲಸ ಮಾಡಿದ್ದಾರೆ. ಇವರು ಪ್ರತಿಷ್ಠಾನದ ಪ್ರಕಟಣೆಯಾದ 'ಶಿಕ್ಷಾ ಕಿ ಬುನಿಯಾದ್' ಎನ್ನುವ ವಾರ್ತಾಪತ್ರದ ಸಂಪಾದಕ ತಂಡದಲ್ಲಿದ್ದಾರೆ. ಇವರು ಶೈಕ್ಷಣಿಕ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ಹೆಚ್ಚಾಗಿ ಬರೆಯುತ್ತಿರುತ್ತಾರೆ ಮತ್ತು ಎನ್‌ಸಿಇಆರ್‌ಟಿಗಾಗಿ ಒಂದು ಪುಸ್ತಕವನ್ನೂ ಬರೆದಿದ್ದಾರೆ. ಇವರನ್ನು* kr.sharma@azimpremjifoundation.org *ಇಲ್ಲಿ ಸಂಪರ್ಕಿಸಬಹುದು.*

